**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು**
**ಸಿ.ಸಿ.ನಂ.2247/2023.**

**ದಿನಾಂಕಃ20-06-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿಯ ಹೆಸರು ಃ | ಚೈತ್ರ ಎಸ್ | ಚಾಸಾ-1, ಪ್ರಾಸಾ-1 |
| ಗಂಡನ ಹೆಸರು ಃ | ಮಂಜುನಾಥ | |
| ವಯಸ್ಸು ಃ | 29 ವರ್ಷ | |
| ಉದ್ಯೋಗ ಃ | ಪಿ ಎಸ್ ಐ, ಪಿ ಟಿ ಎಸ್- ಬೆಂಗಳೂರು. | |
| ವಾಸ ಃ | ಬೆಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2022 ರ ನವೆಂಬರ್ ನಿಂದ 2023 ರ ಜುಲೈ ವರಗೆ ಸಿಂಗಟಗೆರೆ ಠಾಣೆಯಲ್ಲಿ ಆರಕ್ಷಕ ಉಪ ನೀರಿಕ್ಷಕಳಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ01.04.2023 ರಂದು ನಾನು ಸಿಬ್ಬಂದಿಗಳಾದ ಚಾಸಾ 4 ರಿಂದ 6 ರವರೊಂದಿಗೆ ಆಲಘಟ್ಟ ಚಟ್ನಹಳ್ಳಿ ರಸ್ತೆಯಲ್ಲಿ ಗಸ್ತಿನಲ್ಲಿದ್ದಾಗ ಮಧ್ಯಾಹ್ನ 1.15 ಗಂಟೆಗೆ ಬಾತ್ಮೀದಾರರು ಕರೆ ಮಾಡಿ ಆಲಘಟ್ಟ ಗ್ರಾಮದ ಸೇವಲಾಲ್ ದೇವಸ್ಥಾನಕ್ಕೆಹೋಗುವ ರಸ್ತೆಯಲ್ಲಿ ಮರದ ಕೆಳಗೆ ಒಬ್ಬ ಮಹಿಳೆ ಮದ್ಯ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ತಿಳಿಸಿರುತ್ತಾರೆ. ಸದರಿ ಮಾಹಿತಿನ್ನು ನಾನು ಚಾಸಾ 4 ರಿಂದ 6 ರವರಿಗೂ ಸಹಃ ತಿಳಿಸಿರುತ್ತೇನೆ.

ನಂತರ ದಾಳಿಯ ಸಲುವಾಗಿ ಅದೇ ಊರಿನ ಚಾಸಾ 2, 3 ರವರಿಗೆ ನೋಟೀಸು ನೀಡಿ ಮಾಹಿತಿ ತಿಳಿಸಿ, ಅವರು ಒಪ್ಪಿದ ನಂತರ ಸದರಿಯವರೊಂದಿಗೆ ಮಾಹಿತಿ ಇದ್ದ ಸ್ಥಳಕ್ಕೆ ತಲುಪಿ ಇಲಾಖಾ ಜೀಪ್ ನಿಲ್ಲಿಸಿ ನೋಡಿದಾಗ ಅಲ್ಲಿ ಒಬ್ಬ ಮಹಿಳೆಯು ನಮ್ಮನ್ನು ನೋಡಿ ಪ್ಲಾಸ್ಟಿಕ್ ಕವರ್ ಅನ್ನು ಎಸೆದು ಓಡಿ ಹೋಗಲು ಯತ್ನಿಸಿದ್ದು, ನಂತರ ಸಿಬ್ಬಂದಿಗಳು ಸುತ್ತುವರಿದು ಆಕೆಯನ್ನು ವಿಚಾರಿಸಿದಾಗ ಹೆಸರು ನೀಲಾಬಾಯಿ ಎಂದು ತಿಳಿಸಿರುತ್ತಾರೆ.

ನಂತರ ಆಕೆಯ ಬಳಿ ಇದ್ದ ಕಪ್ಪು ಕವರ್ ಅನ್ನು ನೋಡಿದಾಗ ಅದರಲ್ಲಿ 90 ಎಂ ಎಲ್ 50 ರಾಜಾ ವಿಸ್ಕಿ ಪೌಚುಗಳು ಇತ್ತು. ಸದರಿ ಮಹಿಳೆಯ ಬಳಿ 100 ರೂ.ಹಣ ಇತ್ತು. ಹಣದ ಬಗ್ಗೆ ವಿಚಾರಿಸಿದಾಗ ಮದ್ಯ ಮಾರಾಟದಿಂದ ಬಂದ ಹಣ ಎಂದು ತಿಳಿಸಿರುತ್ತಾರೆ. ಮದ್ಯ ಮಾರಾಟಕ್ಕೆ ಪರವಾನಗೆ ಇದೆಯೇ ಎಂದು ವಿಚಾರಿಸಿದಾಗ ಇಲ್ಲ ಎಂದು ತಿಳಿಸಿರುತ್ತಾನೆ. ನಂತರ ನಾನು ವರದಿ ತಯಾರು ಮಾಡಿ ಚಾಸಾ 6 ರವರ ಮುಖಾಂತರ ಠಾಣೆಗೆ ಕಳುಹಿಸಿರುತ್ತೇನೆ.

ನಂತರ, ಠಾಣಾಧಿಕಾರಿಯವರಿಂದ ಪೋನ್ ಮೂಲಕ ಪ್ರಕರಣ ಸಂಖ್ಯೆ ತಿಳಿದಿರುತ್ತೇನೆ. ನಂತರ ಮಧ್ಯಾಹ್ನ 3.30 ರಿಂದ 4 ಗಂಟೆವರೆಗೂ ಪಂಚರ ಸಮಕ್ಷಮ ಮಹಜರ್ ಮಾಡಿ ಸದರಿ ವಸ್ತುಗಳು ಮತ್ತು ಹಣ ಅಮಾನತ್ತು ಪಡಿಸಿಕೊಂಡಿರುತ್ತೇನೆ ಮತ್ತು ಸಾಕ್ಷಿದಾರರ ಸಹಿ ಪಡೆದಿರುತ್ತೇನೆ. ನಂತರ, ಆರೋಪಿ ಮತ್ತು ಮಾಲುಗಳ ಸಮೇತ ಠಾಣೆಗೆ ಬಂದು ಠಾಣಾಧಿಕಾರಿ ಮುಂದೆ ಹಾಜರುಪಡಿಸಿರುತ್ತೇನೆ. ನಂತರ ಆರೋಪಿಗೆ 41(A) ನೋಟೀಸು ಜಾರಿ ಮಾಡಿ ಬಿಡುಗಡೆ ಮಾಡಿರುತ್ತೇನೆ.

ನಂತರ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಸ್ವತ್ತುಪಟ್ಟಿ ಸಂಖ್ಯೆ 12/2023 ರಂತೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ, ಪ್ರಕರಣದ ಕಡತವನ್ನು ತನಿಖೆಗೆಂದು ಚಾಸಾ 11 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ನೋಟೀಸಿನಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ1 ಮತ್ತು 1 ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ವರದಿಯಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ2 ಮತ್ತು 2 ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ಮಹಜರಿನಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ3 ಮತ್ತು 3 ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ಪೋಟೋ ನೋಡಿ ಗುರುತಿಸಿದ್ದು, ಅದನ್ನು ನಿಪಿ4 ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದಲ್ಲಿ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿದರು.

ಆ ದಿನ ಅಮಾನತ್ತು ಪಡಿಸಿಕೊಂಡ ಮದ್ಯ ಮತ್ತು ಹಣ ನೋಡಿದಲ್ಲಿ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಮದ್ಯದ ಪೌಚುಗಳನ್ನು ನೋಡಿ ಗುರುತಿಸಿದರು, ಸದರಿ ಪೌಚುಗಳನ್ನು ಒಟ್ಟಾಗಿ ಮು ಮಾ 1 ಎಂದು ಗುರುತಿಸಲಾಯಿತು, ಮು ಮಾ 1 ರ ಚೀಟಿಯ ಮೇಲಿನ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ಮು ಮಾ 1 ಎ ಎಂದು ಗುರುತಿಸಲಾಯಿತು. ಹಣವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು ಮಾ 2 ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ ಆರೋಪಿ ಪರ ಶ್ರೀ. ಹೆಚ್ ಎನ್ ಎಸ್ ವಕೀಲರಿಂದಃ</u>

ನಾವು ಆ ದಿನ ಬೆಳಗ್ಗೆ ಎಷ್ಟು ಗಂಟೆಗೆ ಗಸ್ತು ಕರ್ತವ್ಯಕ್ಕೆ ತೆರಳಿರುತ್ತೇವೆ ಎಂದು ಈಗ ನೆನಪಿಲ್ಲ. ಗಸ್ತಿನಲ್ಲಿರುವಾಗ ಸಮಾನ್ಯವಾಗಿ ಎಲ್ಲರೂ ಸಮವಸ್ತ್ರದಲ್ಲಿ ಇರುತ್ತಾರೆ ಎಂದರೆ ಸರಿ. ಆ ದಿನ ಚಾಸಾ 5 ರವರು ಸಮವಸ್ತ್ರ ದಲ್ಲಿ ಇದ್ದರು ಎಂದರೆ ಸರಿ. ನಾನು ಸಮವಸ್ತ್ರದಲ್ಲಿ ಇಲ್ಲ ಎಂದರೆ, ಸಮವಸ್ತ್ರದಲ್ಲಿಯೇ ಇರಬೇಕು ಎಂಬ ನಿಯಮ ಇರುವುದಿಲ್ಲ. ಆ ದಿನ ನಾನು ಗಸ್ತು ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಮಾಹಿತಿ ಬಂದ ಸ್ಥಳಕ್ಕೆ ಮಧ್ಯಾಹ್ನ 1.30 ಕ್ಕೆ ತಲುಪಿರುತ್ತೇನೆ. ಸ್ಥಳಕ್ಕೆ ತಲುಪಿದಾಗ ನಾವು ಸಿಬ್ಬಂದಿಗಳು, ಪಂಚರು, ಆರೋಪಿ, ಆರೋಪಿಯ ಸಂಬಂಧಿ ಒಬ್ಬರು ಇದ್ದರು. ಆರೋಪಿಯ ಸಂಬಂಧಿಯ ಹೆಸರು ನನಗೆ ನೆನಪಿಲ್ಲ. ನಿಪಿ2 ನ್ನು ಚಾಸಾ 6 ರವರ ಮೂಲಕ ಬರೆಸಿರುತ್ತೇನೆ. ಅದರಲ್ಲಿ ಅವರ ಸಹಿ ಇಲ್ಲ ಎಂದರೆ ಸರಿ. ಚಾಸಾ 6 ರವರು ಬರೆದ ನಿಪಿ2 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ನಾನೇ ಹೇಳಿ ಬರೆಸಿರುತ್ತೇನೆ.

ಮು ಮಾ 1 ರ ಮದ್ಯದ ಪೌಚುಗಳು ಮದ್ಯದ ಅಂಗಡಿಯಲ್ಲಿ ಸಿಗುತ್ತದೆ ಎಂದರೆ ಸರಿ. ಮು ಮಾ 1 ಆರೋಪಿಯ ಬಳಿ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ 3 ನ್ನು ಚಾಸಾ 4 ಬರೆದಿರುತ್ತಾರೆ. ಚಾಸಾ 4 ರವರ ಸಹಿ ನಿಪಿ3 ರಲ್ಲಿ ಇಲ್ಲ ಎಂದರೆ ಸರಿ. ನಿಪಿ3 ರಲ್ಲಿ ಬರೆದಿರುವ ವಿಚಾರ ನನಗೆ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ಮು ಮಾ 2 ಹಣದ ಕ್ರಮ ಸಂಖ್ಯೆ ನನಗೆ ಗೊತ್ತಿಲ್ಲ.

ನಾನು ಸಾಕ್ಷಿದಾರರಿಗೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ನೋಟೀಸು ಜಾರಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ನೋಟೀಸ್ ಅನ್ನು ಹರೀಶ್ ಬಿನ್ ತಿಮ್ಮಾನಾಯ್ಕ ಮತ್ತು ಮೂರ್ತಿನಾಯ್ಕ ಬಿನ್ ತಿಮ್ಮಾನಾಯ್ಕ ಎಂಬುವವರಿಗೆ ನೀಡಿರುತ್ತೇನೆ ಅವರು ಯಾರು ಎಂದರೆ ಈಗ ನೆನಪಿಲ್ಲ. ಸದರಿ ಹರೀಶ್ ಬಿನ್ ತಿಮ್ಮಾನಾಯ್ಕ ಮತ್ತು ಮೂರ್ತಿನಾಯ್ಕ ಬಿನ್ ತಿಮ್ಮಾನಾಯ್ಕ ರವರು ಮಹಜರ್ ಸಮಯದಲ್ಲಿ ಇರಲಿಲ್ಲ ಎಂದರೆ ಸರಿ. ನಾನು ಆ ದಿನ ಸ್ಥಳದಲ್ಲಿ ಸ್ಥಳಕ್ಕೆ ಹೋಗಿಲ್ಲ , ಆರೋಪಿಯಿಂದ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಕೇಸಿಗೆ ಪೂರಕವಾಗಿ ಎಲ್ಲಾ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಕೇಸಿಗೂ, ಮು ಮಾ 1, 2 ಕ್ಕು ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.